1. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2001–02ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ,

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 45(2), 47(4)ನೇ ಪ್ರಕರಣದ ಮೇರೆಗೆ:

2. ಗುಲ್ಬರ್ಗಾ ವಿಶ್ವವಿದ್ಯಾನಿಲಯದ 2000–01ನೇ ಸಾಲಿನ ವಾರ್ಷಿಕ ಮತ್ತು 1999–2000ನೇ ಮತ್ತು 2000–01ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

3. ಬೆಂಗಳೂರು ವಿಶ್ವವಿದ್ಯಾನಿಲಯದ 2001–02ನೇ ಸಾಲಿವ ವಾರ್ಷಿಕ ವರದಿ.

4. ಮೈಸೂರು ವಿಶ್ವವಿದ್ಯಾನಿಲಯದ 2000–01ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಮತ್ತು ಲೆಕ್ಕಪತ್ರಗಳು.

5. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 1996–97, 1997–98, 1998–99, 1999–2000, 2000–01 ಹಾಗೂ 2001–02ನೇ ಸಾಲಿನ ವಾರ್ಷಿಕ ವರದಿಗಳು.

6. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು 2000–01ನೇ ಸಾಲಿನ ಲೆಕ್ಕ ತನಿಖಾ ವರದಿ ಮತ್ತು ವಾರ್ಷಿಕ ಲೆಕ್ಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

3. ವರದಿಗಳನ್ನೊಪ್ಪಿಸುವುದು

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, 2002ನೇ ಇಸವಿಯ ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕದ, ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:– ವರದಿಯನ್ನು ಒಪ್ಪಿಸಲಾಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ನಾನು ಒಂದು ವಿಚಾರವನ್ನು....

ಅಧ್ಯಕ್ಷರು:– ಸ್ವಲ್ಪ ತಾಳಿ. ಮಾನ್ಯ ಸೋಮಶೇಖರ್‌ರವರು ನಿನ್ನೆ ಪ್ರಿವಿಲೇಜ್ ಮೋಷನ್‌ನ್ನು ಮೂವ್ ಮಾಡಿದ್ದಾರೆ, I have to give preference to that ಅವರು ಮೂವ್ ಮಾಡಿದ್ದಾರೆ. ಮೊದಲು ಪ್ರಿವಿಲೇಜ್ ಮೋಷನ್‌ಗೆ ಅವಕಾಶ ಅನಂತರ ತಮ್ಮದು.

ಶ್ರೀ ಪಿ.ಜಿ.ಆರ್ ಸಿಂಧ್ಯಾ:– ಹೌದು, ಮೊದಲು ಪ್ರಿವಿಲೇಜ್ ಮೋಷನ್‌ಗೆ, ಪ್ರಿಸಿಡೆಂಟ್ ಇರುವುದು ಪ್ರಿವಿಲೇಜ್ ಮೋಷನ್‌ಗೆ ಕೊಡುವುದು, ದಯವಿಟ್ಟು ಕೊಡಿ.

ಶ್ರೀ ಬಿ. ಸೋಮಶೇಖರ್:– ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಸಬ್ಜೆಕ್ಟ್ ಮೇಲೆ ಮಾತನಾಡುವಾಗಲೇ ಮಾತನಾಡುತ್ತೇನೆ.

Mr. Speaker:- Very good. ಒಳ್ಳೆಯದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನಾನು ಶೂನ್ಯ ವೇಳೆಯಲ್ಲಿ ತಮಗೆ ಒಂದು ಪತ್ರವನ್ನು ಕೊಟ್ಟಿದ್ದೇನೆ ದಯಮಾಡಿ ಅವಕಾಶ ಮಾಡಿಕೊಡಿ.